# ಪ್ರಸ್ತುತ ರಂಗ ಶಿಬಿರಗಳಲ್ಲಿ ಮಕ್ಕಳ ನಾಟಕಗಳ ಸ್ವರೂಪ

**ಮಹೇಶ[1] & ನಾಗೇಶ್ ವಿ. ಬೆಟ್ಟಕೋಟೆ[2]**

[1]ಸಂಶೋಧನಾ ವಿದ್ಯಾರ್ಥಿ, ಪ್ರದರ್ಶನ ಕಲಾ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

[2]ಪ್ರಾಧ್ಯಾಪಕರು, ಪ್ರದರ್ಶನ ಕಲಾ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

**Received: 02-07-2023 ; Accepted: 01-08-2023 ; Published: 09-05-2024**

**DOI: https://doi.org/10.5281/zenodo.11162187**

## ABSTRACT:

ಬೇಸಿಗೆ ರಜೆ ಬಂದರೆ ಸಾಕು ಮಕ್ಕಳಿಗೆ ಸ್ವಲ್ಪ ಮನಸ್ಸು ಹಗುರವಾಗುತ್ತದೆ. ಈ ಮನಸ್ಸು ಒಂದು ರೀತಿಯಲ್ಲಿ ಗಿಡದಲ್ಲಿ ಬೆಳೆಯುತ್ತಿರುವ ಒಂದು ಹೂವಿನ ಮೊಗ್ಗುವಿದ್ದಾದಂತೆ. ಈ ಮೊಗ್ಗು ಹೂವಾಗಿ ಹರಳುವುದಕ್ಕೆ ಹೇಗೆ ಪ್ರಯತ್ನಿಸುತ್ತದೆಯೋ ಹಾಗೆ ಮಕ್ಕಳ ಮನಸ್ಸು ಸಹ ಬೇಸಿಗೆ ಯಾವಾಗ ಬರುತ್ತದೆ, ನಾವು ಬೇಸಿಗೆ ಶಿಬಿರದಲ್ಲಿ ಕುಣಿದು ಕೊಪ್ಪಳಿಸೋದು ಯಾವಾಗ ಎಂದು ಮಕ್ಕಳ ಮನಸ್ಸು ಚಟಪಡಿಸುತ್ತಿರುತ್ತದೆ. ಬೇಸಿಗೆ ಶಿಬಿರದಲ್ಲಿ ಬಣ್ಣ ಹಚ್ಚಿ ಅಲಂಕಾರ ಮಾಡಿ ಇನ್ನಷ್ಟು ಮನಸ್ಸು ಹೂವಿನಂತೆ ಹರಳುವುದಕ್ಕೆ ರಂಗ ಶಿಬಿರಗಳು ಮಕ್ಕಳಿಗೆ ಪೂರಕವಾಗಿ ಕಾರ್ಯ ನಿರ್ವಹಿಸುತ್ತವೆ. ರಂಗಶಿಬಿರದ ಪೋಸ್ಟರ್, ಬಿತ್ತಿ ಚಿತ್ರಗಳು, ಹಾಗೂ ಮೊಬೈಲ್ ನಿಂದ ಹರಿದಾಡುವ ಸೋಶಿಯಲ್ ಮೀಡಿಯಾ ಪ್ರಚಾರದ ಸದ್ದು ಜೋರಾದಾಗ ಮಕ್ಕಳ ಪೋಷಕ ರಿಗೆ ಸ್ವಲ್ಪ ನೆಮ್ಮದಿಯ ಬಿಡು ಸಿಕ್ಕಂತಾಗುತ್ತದೆ. ಶಾಲೆ ರಜೆ ಕೊಟ್ಟರೆ ಸಾಕು ಮಕ್ಕಳನ್ನು ಒಂದು ಕಡೆ ಹಿಡಿದಿಡುವುದು ಪೋಷಕರಿಗೆ ದೊಡ್ಡ ಸಾವಲಾಗಿರುತ್ತದೆ. ಮಕ್ಕಳು ಒಂದು ಕಡೆ ಕುಳಿತಲ್ಲೇ ಕುಳಿತುಕೊಳ್ಳದೆ ನಿಂತಲ್ಲೇ ನಿಂತುಕೊಳ್ಳದೆ ಮಕ್ಕಳ ತುಂಟಾಟ ಹೆಚ್ಚಾದಾಗ ಈ ರಂಗಶಿಬಿರಗಳು ಆ ಮಕ್ಕಳನ್ನು ಕೈಬೀಸಿ ಕರೆದು ಸಾಂಸ್ಕೃತಿಕ ಕಲೆಗಳ ಶಿಕ್ಷಣವನ್ನು ಕೊಡಲಿಕ್ಕೆ ಮುಂದಾಗುವುದನ್ನು ನಾವು ಇವತ್ತಿಗೂ ನೋಡುತ್ತಾ ಬಂದಿದ್ದೇವೆ. ಮಕ್ಕಳಲ್ಲಿ ಕ್ರಿಯಾಶೀಲತೆ ಹೆಚ್ಚಾಗಿರುತ್ತದೆ. ಆ ಕ್ರಿಯಾಶೀಲತೆಗೆ ಅನುಗುಣವಾಗಿ ರಂಗ ಶಿಬಿರಗಳಲ್ಲಿ ಮಕ್ಕಳು ತಮ್ಮನ್ನು ತಾವು ತೊಡಿಸಿಕೊಂಡು ಏಕಾಗ್ರತೆಯಿಂದ ಕಲಿಕೆಗಳ ಕಡೆ ಮುಖ ಮಾಡಿದಾಗ ರಂಗ ಶಿಬಿರಗಳಿಗೆ ಪರಿಪೂರ್ಣವಾದ ಅರ್ಥ ಸಿಗುತ್ತದೆ. ರಂಗಶಿಬಿರದಲ್ಲಿ ಭಾಗವಹಿಸಿದ ಮಗು ತನ್ನ ಇಡೀ ಜೀವನದ ದೃಷ್ಟಿಕೋನವನ್ನು ಬದಲಾಯಿಸಿಕೊಳ್ಳುವುದರ ಜೊತೆಗೆ ರಂಗ ಶಿಬಿರಗಳಲ್ಲಿ ತನ್ನನ್ನು ತಾನು ಮರೆತು ಸಮಾಜದಲ್ಲಿ ಒಳ್ಳೆಯ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಸಾಧಕನಾಗಿ ಹೊರಹೊಮ್ಮಲಿಕ್ಕೆ ಸಾಧ್ಯವಾಗುತ್ತದೆ. ರಂಗಶಿಬಿರಗಳಲ್ಲಿ ಪಾಲ್ಗೊಂಡ ನೂರಾರು ಸಾಧಕರ ಇತಿಹಾಸವನ್ನು ರಂಗಭೂಮಿಯಲ್ಲಿ ಕಾಣಬಹುದಾಗಿದೆ. ರಂಗಭೂಮಿಯ ಇತಿಹಾಸವನ್ನು ಸೃಷ್ಟಿಸಲಿಕ್ಕೆ ರಂಗಶಿಬಿರಗಳು ಮುಖ್ಯ ಪಾತ್ರ ವಹಿಸುತ್ತವೆ. ರಂಗಶಿಬಿರಗಳು ಇಲ್ಲದೆ ರಂಗಭೂಮಿ ಬೆಳವಣಿಗೆ ಕಾಣಲಿಕ್ಕೆ ಸಾಧ್ಯವಿಲ್ಲ,

ರಂಗಭೂಮಿ ಇಲ್ಲದೆ ರಂಗಶಿಬಿರಗಳು ಹುಟ್ಟಲಿಕ್ಕೆ ಸಾಧ್ಯವಿಲ್ಲ. ರಂಗ ಶಿಬಿರಗಳು ಪ್ರತಿಯೊಂದು ಮಗುವಿನ ವಿಕಾಸಕ್ಕೆ ಶಕ್ತಿಯನ್ನು ತುಂಬಿ ಸಮಾಜದೊಟ್ಟಿಗೆ ಸಾಗಲಿಕೆ ಚಾಲನೆಯನ್ನು ನೀಡುತ್ತದೆ. ಆದ್ದರಿಂದ ರಂಗ ಶಿಬಿರಗಳ ಪ್ರಾಮುಖ್ಯತೆ ಮತ್ತು ಉದ್ದೇಶ, ಮಹತ್ವದ, ಜೊತೆಗೆ ಪ್ರಸ್ತುತ ರಂಗ ಶಿಬಿರಗಳ ಅವಲೋಕನವನ್ನು ರಂಗಶಿಬಿರಗಳಲ್ಲಿ ಮಕ್ಕಳ ನಾಟಕಗಳ ಸ್ವರೂಪವನ್ನು ಹಾಗೂ ಈ ಲೇಖನದಲ್ಲಿ ಕ್ಷೇತ್ರಕಾರ್ಯ ವಿಧಾನ ಹಾಗೂ ವಿಶ್ಲೇಷಣಾತ್ಮಕ ವಿಧಾನವನ್ನು ಬಳಸಿಕೊಂಡು ನಾನು ಕಂಡುಕೊಂಡಂತಹ ರಂಗ ಶಿಬಿರಗಳ ಫಲಿತಗಳನ್ನು ಚರ್ಚಿಸಲಿದ್ದೇನೆ.

## KEYWORDS:

ರಂಗಭೂಮಿ ಹಿನ್ನೆಲೆ, ತರಬೇತಿಯ ಅಂಶಗಳು, ಬೇಸಿಗೆ ಶಿಬಿರದ ರೂಪರೇಷಗಳು, ಶಿಬಿರಾರ್ಥಿಗಳ ಕಲಿಕೆಯ ಕ್ರಮ.

## ರಂಗ ಶಿಬಿರಗಳ ಪ್ರಾಮುಖ್ಯತೆ:

» ಮಕ್ಕಳಿಗೆ ಕಲೆಗಳ ಪರಿಚಯದ ಜೊತೆಗೆ ಪ್ರಯೋಗಿಕವಾಗಿ ಕಲೆಗಳನ್ನು ಕಲಿಸುವುದು.
» ಮಕ್ಕಳಲ್ಲಿ ಇರುವ ಪ್ರತಿಭೆಗಳಿಗೆ ವೇದಿಕೆ ಕಲ್ಪಿಸಿ ಕೊಡುವುದು .
» ಮಕ್ಕಳಲ್ಲಿರುವ ಹಿಂಜರಿಕೆಯನ್ನು ಹೊಡೆದೋಡಿಸಿ ಮಗುವೇ ಸ್ವಯಂ ಪ್ರೇರಿತವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳುವಂತೆ ಮಾಡುವುದು.
» ಮಕ್ಕಳಲ್ಲಿ ಸ್ನೇಹ, ಒಡನಾಟ,ಬದ್ಧತೆ, ಹಾಗೂ ಶಿಸ್ತು ಕಲಿಸುವುದು.
» ತಮ್ಮ ಜೀವನದಲ್ಲಿ ಆದ ಕೆಲ ಘಟನೆಗಳನ್ನು ಕಥಾರೂಪಕ್ಕೆ ತರುವುದು .
» ಜನಪದ ಕಲಾ ಪ್ರಕಾರಗಳನ್ನು ಉಳಿಸುವ ನಿಟ್ಟಿನಲ್ಲಿ ಮಕ್ಕಳಿಗೆ ಜನಪದ ಹಾಡು ಕಥೆ, ಕುಣಿತಗಳನ್ನು ಹೇಳಿಕೊಟ್ಟು ಮಕ್ಕಳಲ್ಲಿಯೇ ಅಡಗಿರುವ ಜಾನಪದ ಹಿನ್ನೆಲೆಯನ್ನು ಹೊರತೆಗೆಯುವ ಕಾರ್ಯ ಮಾಡುವುದು.
» ಬೀದಿ ನಾಟಕದ ಮೂಲಕ ಶಾಲಾ ಬಿಟ್ಟ ಮಕ್ಕಳನ್ನು ಶಾಲೆಗೆ ಕರೆತರುವ ಕೆಲಸ ರಂಗಶಿಬಿರಗಳಲ್ಲಿ ಮಾಡುವುದು.
» ರಂಗಶಿಬಿರ ಏರ್ಪಡಿಸಿದ ಹಳ್ಳಿ ಅಥವಾ ನಗರಗಳಲ್ಲಿ ಸ್ಥಳೀಯ ಹಿರಿಯ ಕಲಾವಿದರಿಂದ ತರಬೇತಿ ನೀಡುವುದು. ಆರೋಗ್ಯ ಮಕ್ಕಳಲ್ಲಿ ಮುಖ್ಯ ಪಾತ್ರ ವಹಿಸುತ್ತದೆ.ಆದ್ದರಿಂದ ಸ್ಥಳೀಯ ಜಾನಪದ ವೈದ್ಯರಿಂದ ಹಾಗೂ ಹಿರಿಯರಿಂದ ಹಿಂದೆ ಬಳಸುತ್ತಿದ್ದ ಗಿಡಮೂಲಿಕೆ ಔಷಧಿಗಳ ಬಗ್ಗೆ ಪರಿಚಯಿಸಿ ತರಬೇತಿ ನೀಡುವುದು.

## ರಂಗ ಶಿಬಿರಗಳ ಉದ್ದೇಶ:

» ಮಕ್ಕಳ ದೈನಂದಿನ ಸಂಪ್ರದಾಯ ಅಥವಾ ರೂಢಿಗಳಿಗಿಂತ ಭಿನ್ನವಾಗಿರುವಂತೆ ಮಾಡುವುದು.
» ಯಾವಾಗಲೂ ಶಾಲೆಯಲ್ಲಿ ಕಾಡುತ್ತಿದ್ದ ಹೋಂವರ್ಕ್,ಯೂನಿಫಾರ್ಮ್, ನಾಲ್ಕು ಗೋಡೆಗಳ ವಾತಾವರಣದಿಂದ ಸ್ವಾತಂತ್ರವಾದ ವಾತಾವರಣಕ್ಕೆ ಕರೆ ತರುವುದು.
» ಕೂರುವ ಜಾಗ, ಓಡಾಟ, ಕುಣಿದಾಟ, ಕೂಗಾಟಕ್ಕೆ, ಹಾಗೂ ಅವರ ಮನಸ್ಸನ್ನು ಸುಮಚಿತ್ತಾದಲ್ಲಿಡುವಂತೆ ಮುಕ್ತ ಅವಕಾಶ ನೀಡುವುದು.
» ಬೇರೆ ಬೇರೆ ಮಕ್ಕಳ ಅಭಿರುಚಿಗಳ ಪರಿಚಯ ಓಡಾಟ.

» ನೋಡುವುದರ ಜೊತೆಗೆ ಗಮನಿಸುವುದನ್ನು ರೂಢಿಸಿಕೊಳ್ಳುವುದಕ್ಕೆ ಅವಕಾಶ.
» ನಾಯಕತ್ವದ ಬೆಳವಣಿಗೆ ಬೆಳೆಸುವುದು.
» ಮಕ್ಕಳ ಕಥೆಗಳನ್ನು ಮಕ್ಕಳ ಕಡೆಯಿಂದಲೇ ಹೇಳಿಸಿ ಅದಕ್ಕೆ ಸಮಗ್ರ ಅಭಿಪ್ರಾಯ ಹಾಗೂ ಚರ್ಚೆಗೆ ಅವಕಾಶ ಮಾಡಿಕೊಡುವುದು.
» ಮಕ್ಕಳ ಪಂಚೇಂದ್ರಿಯಗಳು ಕ್ರಿಯೆಶೀಲ ವಾಗುವಂತೆ ಶಿಬಿರಗಳು ಮುಖ್ಯ ಕಾರ್ಯ ಮಾಡುತ್ತವೆ.
» ಮಕ್ಕಳಲ್ಲಿ ಸಹಾಯ ಮಾಡುವ ಮನೋಭಾವ ಬೆಳೆಯುತ್ತದೆ.
» ಮಕ್ಕಳ ಸಂತೆಗೆ ಮುಖ್ಯ ವೇದಿಕೆ ಕಲ್ಪಿಸುವುದು. ಮಕ್ಕಳೇ ವ್ಯಾಪಾರ ಮಾಡುವುದರಿಂದ ಲಾಭ ನಷ್ಟದ ಬಗ್ಗೆ ವ್ಯವಹಾರಿಕ ಜ್ಞಾನ ಮೂಡಿಸುವುದು.
» ನೆನಪಿನ ಶಕ್ತಿಯ ಹೆಚ್ಚಳ,ಸಂಯೋಜಿತ ವ್ಯಕ್ತಿತ್ವ ವಿಕಾಸನ, ವಾಕ್ ಚಾತುರ್ಯ, ಸಂವಹನ ಕೌಶಲ್ಯ, ಕ್ರಿಯಾತ್ಮಕತೆ, ಸೃಜನಶೀಲತೆ, ಕಲ್ಪನಾ ಶೀಲತೆ, ಮನೋದೈಹಿಕ ಅಭಿವ್ಯಕ್ತಿ, ನಾಯಕತ್ವದ ಬೆಳವಣಿಗೆ, ಸಂಘಟನೆ ಹೀಗೆ ಹಲವಾರು ಉದ್ದೇಶಗಳೆನಿಟ್ಟುಕೊಂಡು ರಂಗಶಿಬಿರ ಏರ್ಪಡಿಸಬೇಕಾಗುತ್ತದೆ.
» ಸಂಸ್ಕೃತಿ ಉಳಿಯುವ ನಿಟ್ಟಿನಲ್ಲಿ ಕಲೆ ವಿಕಾಸಗೊಳ್ಳುತ್ತದೆ.

ಪ್ರಸ್ತುತ ಮಕ್ಕಳ ರಂಗಭೂಮಿಯನ್ನು ನಾವು ಬೆಳವಣಿಗೆಯಾಗುವುದನ್ನು ನೋಡಬಹುದು. ಬೆಳೆಯ ಸಿರಿ ಮೊಳಕೆಯಲ್ಲಿ ಎಂಬ ನುಡಿಯನ್ನು ನಮ್ಮ ಹಿರಿಕರು ಹೇಳಿದಂತೆ ಇವತ್ತಿನ ರಂಗಶಿಬಿರಗಳಲ್ಲಿ ಮಕ್ಕಳ ನಾಟಕಗಳು ಮಕ್ಕಳಲ್ಲಿ ಅಡಗಿರುವ ಸೃಜನಶೀಲತೆ ಮತ್ತು ಕಲ್ಪನೆಗಳನ್ನು ಹೆಚ್ಚಿಸುತ್ತದೆ. ಒಂದು ರಂಜನಿಯವಾದ ಬಣ್ಣದ ಲೋಕದಲ್ಲಿ ಮೂರ್ತರೂಪವನ್ನು ನೀಡಿ ಕಲ್ಪನೆ ಮತ್ತು ಅನುಭವಗಳೆರಡು ಪುಷ್ಟಿ ನೀಡುವುದನ್ನು ರಂಗಶಿಬಿರಗಳಲ್ಲಿ ಕಾಣಬಹುದು. ಶಾಲೆ ರಜೆ ದಿನಗಳು ಬಂದರೆ ಸಾಕು ನಾಡಿನಾದ್ಯಂತ ರಂಗಶಿಬಿರಗಳು ಪ್ರಾರಂಭವಾಗುತ್ತವೆ. ರಂಗಭೂಮಿಯಲ್ಲಿ ರಂಗ ಶಿಕ್ಷಣ ಪಡೆದ ವೃತ್ತಿ ಮತ್ತು ಅರೆವೃತ್ತಿ ರಂಗ ನಿರ್ದೇಶಕರು, ರಂಗಕರ್ಮಿಗಳು, ಏರ್ಪಡಿಸುವ ರಂಗಶಿಬಿರಗಳಲ್ಲಿ ಮಕ್ಕಳ ಮನಸ್ಸಿನ ಮೇಲೆ ಪ್ರಭಾವ ಬೀರುವಂಥ ಹ ಸಾಂಸ್ಕೃತಿಕ ಕ್ರಿಯಾಶೀಲತೆಯಿಂದ ತೊಡಗಿಸಿಕೊಂಡು ಮಕ್ಕಳ ಸಂವೇದನೆಳಲ್ಲಿ ಜಾಗೃತಗೊಳಿಸುವುದರ ಜೊತೆಗೆ ಪೌರಾಣಿಕ, ರಾಮಾಯಣ, ಮಹಾಭಾರತ,, ಪ್ರಾಣಿ ಪಕ್ಷಿಗಳು, ಪರಿಸರದಲ್ಲಿ ಲಭ್ಯವಾಗುವ ರಂಗ ಪೌಷ್ಟಿಕ ಅಂಶಗಳನ್ನು ಇಟ್ಟುಕೊಂಡು ವಿಚಾರಗಳ ಬಗ್ಗೆ ನಾಟಕ ಪ್ರಯೋಗಗಳು ಜಾನಪದ ಶೈಲಿಯಲ್ಲಿ ಗ್ರಾಮೀಣ ಅಥವಾ ನಗರಗಳಲ್ಲಿ ಮನೋರಂಜನಾತ್ಮಕವಾಗಿ ಶಿಬಿರದಲ್ಲಿ ಪಾಲ್ಗೊಂಡ ಮಕ್ಕಳ ಮನಸ್ಸಿನ ಉದ್ದೇಶಗಳು ಭಿನ್ನ-ಭಿನ್ನ ಶೈಲಿಯಲ್ಲಿ ಬೆಳೆಯುವುದರ ಜೊತೆಗೆ ನಾಟಕಗಳ ಸ್ವರೂಪಗಳು ಕಂಡುಬರುತ್ತವೆ. ರಂಗಶಿಬಿರಗಳು ಪ್ರತಿ ಮಕ್ಕಳಲ್ಲಿರುವ ಹೊಸ ಕಲಾತ್ಮಕತೆಯನ್ನು ವೃದ್ಧಿಸಿ ಅದಕ್ಕೆ ಶಕ್ತಿ ತುಂಬುವುದರಿಂದ ಮಕ್ಕಳ ಮನಸ್ಸಿನಲ್ಲಿ ರಂಗ ಬೆಳವಣಿಗೆ ಕಾಣಲು ಸಾಧ್ಯವಾಗುತ್ತದೆ. ಇದರಿಂದಾಗಿ ರಂಗ ಶಿಬಿರಗಳಿಗೆ

ಒಂದು ಅರ್ಥಪೂರ್ಣವಾದ ರಂಗಶಕ್ತಿ ಲಭಿಸುತ್ತದೆ. ಉದಾಹರಣೆಗೆ : ಚಿಕ್ಕ ಮಕ್ಕಳು ಆಟವಾಡುವಾಗ, ಪಾಠ ಕೇಳುವಾಗ ಒಂದು ದೃಶ್ಯ ನೆನೆಪಿಸಿಕೊಂಡಾಗ ಅಲ್ಲಿ ಮಕ್ಕಳ ಅನುಕರಣೆ ಸಹಜವಾಗಿ ಕಣ್ಣಿಗೆ ಕಟ್ಟುತ್ತದೆ. ಮಕ್ಕಳ ಅಂಗೀಕ ದೃಶ್ಯ ಅಭಿನಯವಾಗಿ ಕಣ್ಣಿಗೆ ದೃಶ್ಯ ಲೋಕವನ್ನೇ ಸೃಷ್ಟಿಸಿ ಒಂದು ಚಿಕ್ಕದಾದ ರಂಗಭೂಮಿಯ ವಾತಾವರಣ ಸೃಷ್ಟಿಯಾಗುತ್ತದೆ. ಮಕ್ಕಳಲ್ಲಿ ಅಭಿನಯ ಎಂಬ ಕಲೆಯು ತುಂಬಾ ಹತ್ತಿರವಾದದ್ದು. ಮನೆಯಲ್ಲಿ ಚಿಕ್ಕ ಮಗುವನ್ನು ಕೇಳಿ ಅವರ ಮೂಗು ಹೇಗಿದೆ, ಕಣ್ಣು ಹೇಗಿದೆ ಅಂತ ಕೇಳಿದಾಗ ಮಗು ತನ್ನದೇ ಆದ ಶೈಲಿಯಲ್ಲಿ ಅನುಕರಿಸಿ ತೋರಿಸುತ್ತದೆ. ಆಗ ನೋಡುಗರಿಗೆ ಒಂದು ಕ್ಷಣ ಮನಸ್ಸು ಹಗುರವಾಗಿ ಸಂತೋಷ ನೀಡುತ್ತದೆ.

**ಮಕ್ಕಳ ನಾಟಕಗಳ ಸ್ವರೂಪ:**

ಪ್ರಸ್ತುತ ರಂಗ ಶಿಬಿರಗಳಲ್ಲಿ ಮಕ್ಕಳಿಗೆ ಹತ್ತಿರವಾಗುವಂಥ ಅವರ ಮನಸ್ಸಿಗೆ ತೃಪ್ತಿ ಕೊಡುವಂಥ ನಾಟಕದ ವಸ್ತು ಬಗ್ಗೆ ತಿಳಿದುಕೊಳ್ಳೋಣ. ಮಕ್ಕಳ ನಾಟಕಗಳಲ್ಲಿ ಹಿರಿಯರು ಅಭಿನಯಿಸುವಂತಿರಬೇಕೆ?.. ಅಥವಾ ನಾಟಕದ ವಸ್ತು ವಿಷಯ ಯಾವುದೇ ಇದ್ದರೂ ಸಹ ಅದರಲ್ಲಿ ಮಕ್ಕಳೇ ತಮ್ಮ ಅಂಗೀಕಾಭಿನಯದ ಮೂಲಕ ಅಭಿನಯಿಸುವಂತಿರಬೇಕೆ?.. ಇಂಥ ಹಲವಾರು ಪ್ರಶ್ನೆಗಳಿಗೆ ನಾವು ಯೋಚಿಸಬೇಕಾಗುತ್ತದೆ. ಪ್ರಮುಖವಾಗಿ ಕಥಾ ವಸ್ತುವಿಗೆ ಸಂಬಂಧಿಸಿದಂತೆ ಯಾವುದೇ ನಾಟಕವನ್ನು ಮಕ್ಕಳಿಗೆ ಕಲಿಸುವುದಕ್ಕಿಂತ ಮುಂಚೆ ನಾಟಕದ ಸಂಪೂರ್ಣ ಕಥಾವಸ್ತು ಮಕ್ಕಳ ಮನಸ್ಸಿಗೆ ಹತ್ತಿರವಾಗಿರಬೇಕು. ಪ್ರತಿ ನಾಟಕದ ಕಥಾ ವಸ್ತುವಿನಲ್ಲಿ ಪ್ರಸ್ತುತತೆ ಇರಬೇಕಾಗುತ್ತದೆ. ಮಕ್ಕಳಿಂದ ಅಭಿನಯ ಕೂಡಿರಬೇಕು ಎಂಬುದರ ಹಲವರ ಸ್ಪಷ್ಟ ನಿಲುವುವಾಗಿರುತ್ತದೆ, ಆಯ್ಕೆಯ ಸಂದರ್ಭದಲ್ಲಿ ವಸ್ತು ವಿಷಯಗಳಲ್ಲಿ ಮಕ್ಕಳೇ ಒಪ್ಪುವಂತಹ ಲವಲವಿಕೆಯ ಬಣ್ಣಮಯವಾಗಿರಬೇಕು. ಮಕ್ಕಳು ತಮ್ಮ ಪೋಷಕರ ಎದುರಿನಲ್ಲಿ ಆಸಕ್ತಿದಾಯಕವಾಗಿ ಅಭಿನಯಿಸುವುದನ್ನು ಇಷ್ಟಪಡುತ್ತಾರೆ. ಪ್ರತಿಯೊಂದು ರಂಗಶಿಬಿರಗಳಲ್ಲಿ ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವ ನಾಟಕದ ವಸ್ತುಗಳಲ್ಲಿ ಭಿನ್ನತೆ ಕಾಣಬಹುದು. ವೈವಿಧ್ಯಮಯವಾದ ವಿಚಾರಗಳು ಮತ್ತು ಚಿಂತನೆಗಳನ್ನೊಳಗೊಂಡ ನಾಟಕ ಕಥಾವಸ್ತುಗಳು ಮಕ್ಕಳು ಪ್ರಯೋಗತ್ಮಕವಾಗಿ ಪ್ರದರ್ಶನಗಳಲ್ಲಿ ಆಕರ್ಷಣೀಯಾಗುವುದಕ್ಕೆ, ಮಕ್ಕಳಲ್ಲಿ ಆರೋಗ್ಯ, ಪರಿಸರ, ಶಿಕ್ಷಣ, ಪ್ರಕೃತಿಯ ವಿಕೋಪಗಳು, ಭಾವೈಕ್ಯತೆ,ಮೌಲ್ಯಗಳು, ವಿಶಿಷ್ಟ/ಆದರ್ಶ ವ್ಯಕ್ತಿಗಳ ಜೀವನಾನುಭವಗಳು, ಹಾಸ್ಯ ಪ್ರಸಂಗ,ಆಹಾರ, ಗ್ರಾಮ ನೈರ್ಮಲ್ಯ, ವೈಚಾರಿಕ, ಚಾರಿತ್ರಿಕ, ವಿಚಾರಗಳು ಇತ್ಯಾದಿ ಅಂಶಗಳು ಸೇರಿಕೊಂಡಿರಬೇಕು. ಹೀಗೆಯೇ ಮುಂದುವರಿಯುತ್ತಾ ಜನಸಂಖ್ಯಾ ಸ್ಫೋಟ, ಜನಪದ ಕತೆ, ಸಾಮಾಜಿಕ ಪಿಡುಗುಗಳು, ಮತಧರ್ಮಗಳ ಸಾಮರಸ್ಯ, ಭೀಕರ ರೋಗಗಳು, ಕುಟುಂಬದ

ಸಮಸ್ಯೆಗಳು, ವೈಜ್ಞಾನಿಕ ಪ್ರಜ್ಞೆ, ಲಿಂಗ ಸಮಾನತೆ, ಇಂಥ ವಿಷಯಗಳನ್ನೊಳಗೊಂಡ ನಾಟಕಗಳು ಮಕ್ಕಳ ಮನಸ್ಸನ್ನು ಪರಿವರ್ತನೆಗೊಳಿಸುತ್ತವೆ.

ಮಕ್ಕಳ ನಾಟಕಗಳಲ್ಲಿ ಈ ಕೆಳಗಿನ ಅಂಶಗಳು ಅತಿ ಅವಶ್ಯಕವೆನಿಸುತ್ತದೆ. ಸ್ಪಷ್ಟ ಮಾತುಗರಿಕೆ, ಸೂಕ್ತ ಮುಖಭಾವ, ಸಮರ್ಪಕ ಚಲನವಲನ ಈ ಮೂರು ಅಂಶಗಳ ಬಗ್ಗೆ ಮಕ್ಕಳಿಗೆ ತಿಳುವಳಿಕೆ ಮೂಡಿಸಿದರೆ ಮಾತ್ರ ಮಕ್ಕಳ ಪ್ರದರ್ಶನ ಅರ್ಥ ಪೂರ್ಣವಾಗಿರುತ್ತದೆ. ಮಕ್ಕಳು ರಂಗದ ಮೇಲೆ ತಮ್ಮ ಪಾತ್ರವನ್ನು ಭಾವಪೂರ್ಣವಾಗಿ ಅಭಿನಯಿಸಿದಾಗ ಅಲ್ಲಿ ದೈಹಿಕವಾಗಿ ಮಾನಸಿಕವಾಗಿ ಮಕ್ಕಳ ನಟನೆ ಯಶಸ್ಸನ್ನು ಪಡೆಯುತ್ತದೆ. ಮಕ್ಕಳ ರಂಗಭೂಮಿ ಬಗ್ಗೆ ಪ್ರೊ. ಎಚ್. ಕೆ. ರಾಮನಾಥ್ ರವರು ವ್ಯಾಖ್ಯಾನವನ್ನು ನೀಡಿದ್ದಾರೆ. "ಶಿಕ್ಷಣದಲ್ಲಿ ರಂಗಕಲೆ ನಿಜಕ್ಕೂ ಹೃದಯ ವೈಶಾಳಕ್ಕೆ ತನ್ಮೂಲಕ ವ್ಯಕ್ತಿತ್ವ ವಿಕಾಸನಕ್ಕೆ ಅತ್ಯಮೂಲ್ಯ ಮಾಧ್ಯಮವೆಂದು ಹೇಳಿದ್ದಾರೆ.

**ಉಪಸಂಹಾರ:**

ಪ್ರತಿಯೊಂದು ರಂಗಶಿಬಿರಗಳಲ್ಲಿ ಪ್ರತಿವರ್ಷದಂತೆ ನೀಡುವ ಕಲಿಕೆಗಳು ಮರು ಕಲಿಕೆಗೆ ಅವಕಾಶ ಮಾಡಿಕೊಡಬಾರದು. ಹೊಸ ಹೊಸ ವಿಚಾರಧಾರೆಗಳನ್ನೊಳಗೊಂಡ ಇವತ್ತಿನ ಸಂದರ್ಭದ ಸ್ಥಿತಿಗತಿಗಳನ್ನ ಹಾಗೂ ಜನಪದಕಥಾವಸ್ತುಗಳನ್ನೊಳಗೊಂಡಂತೆ ರಂಗಶಿಬಿರಗಳ ಕಲಿಕೆಯ ವಿಷಯಗಳು ಬದಲಾಗಬೇಕು. ಮಕ್ಕಳಿಗೆ ಶಿಸ್ತುಬದ್ಧವಾದ ರಂಗ ತಾಲಿಮು ನೀಡಿ ಅವರನ್ನ ಸಮಾಜದ ವ್ಯಕ್ತಿಯಾಗಿ ರೂಪಗೊಳ್ಳುವಂತೆ ಮಾಡಬೇಕು. ಪ್ರತಿಯೊಂದು ವಿದ್ಯಾ ಸಂಸ್ಥೆಗಳಲ್ಲಿ ನಾಟಕದ ಪಠ್ಯಪುಸ್ತಕ ಚಾಲ್ತಿಗೆ ಬರಬೇಕು. ಆ ಶಿಕ್ಷಣ ಕೇಂದ್ರಗಳಲ್ಲಿ ಬದ್ಧತೆ ಇರುವ ಶಿಕ್ಷಕರು ಇರಬೇಕು. ಅವರಿಗೆ ರಂಗಭೂಮಿ ಬಗ್ಗೆ ಸಂಪೂರ್ಣವಾದ ರಂಗಭೂಮಿ ಪರಿಚಯವಿರಬೇಕು. ರಂಗ ಶಿಕ್ಷಣದಲ್ಲಿ ಪರಿಣಿತಿ ಇದ್ದರೆ ಮಾತ್ರ ಮಕ್ಕಳ ರಂಗಭೂಮಿ ಉಳಿಯುತ್ತದೆ ಮತ್ತು ಬೆಳೆಯುತ್ತದೆ. ಮಕ್ಕಳ ಆಲೋಚನೆ ಭಾವನೆಗಳನ್ನು ಪೋಷಕರು ಶಿಕ್ಷಕರು ಅರ್ಥ ಮಾಡಿಕೊಳ್ಳುತ್ತಾ ಮಕ್ಕಳನ್ನು ಬೆಳೆಸಬೇಕು. ಮಾನಸಿಕ ಅಥವಾ ದೈಹಿಕ ಶಿಕ್ಷೆಯನ್ನು ಕೊಡದೆ, ವ್ಯಂಗ್ಯವಾಗಿ ಮಾತನಾಡುವುದು, ಸುಮ್ಮನೆ ಮಕ್ಕಳ ಮನಸ್ಸಿಗೆ ನೋವುಂಟು ಮಾಡಬಾರದು. ಪ್ರತಿಯೊಂದು ಮಗು ಸಹ ಕೆಲ ಕೌಟುಂಬಿಕ ಸಮಸ್ಯೆಗಳಿಂದ ಬಂಧನಕ್ಕೊಳಪಟ್ಟಿರುತ್ತದೆ. ಆ ಬಂಧನದಿಂದ ಬಿಡುಗಡೆಗೊಳಿಸುವ ಕೆಲಸ ರಂಗಭೂಮಿ ಮಾಡುತ್ತದೆ. ಶಾಲೆಗಳಲ್ಲಿ ನಡೆಯುವ ಪ್ರತಿಭಾ ಕಾರಂಜಿ ಕಾರ್ಯಕ್ರಮಗಳಲ್ಲಿ ಮಕ್ಕಳಿಗೆ ಸಂತೋಷ ಹಾಗೂ ಆರೋಗ್ಯಕರವಾದ ಆಲೋಚನೆಗಳನ್ನು ಪ್ರೇರೇಪಿಸುವುದು ಶಿಕ್ಷಣದ ಕಲಿಕೆಯ

ಪ್ರಕ್ರಿಯೆಗಳಲ್ಲಿ ರಂಗಭೂಮಿಯ ಪಾತ್ರ ಮುಖ್ಯವೆನಿಸುತ್ತದೆ. ರಂಗಶಿಬಿರಗಳಲ್ಲಿ ಪ್ರತಿಯೊಬ್ಬ ನಿರ್ದೇಶಕ ಮತ್ತು ಸಂಪನ್ಮೂಲ ವ್ಯಕ್ತಿಗಳು ಮಕ್ಕಳನ್ನು ಆತ್ಮವಿಶ್ವಾಸದಿಂದ ನೋಡಿಕೊಂಡು ಅವರಲ್ಲಿರುವ ಪ್ರತಿಭೆಗಳನ್ನು ಹೊರಹಾಕಲಿಕ್ಕೆ ಪ್ರಯತ್ನಿಸಬೇಕು. ರಂಗಶಿಬಿರಗಳ ಸ್ವರೂಪ ಭಿನ್ನ-ಭಿನ್ನ ರೂಪಗಳಲ್ಲಿ ಬದಲಾಗಬೇಕು. ಕಥಾ ವಸ್ತು ಪ್ರಸ್ತುತ ಸಂದರ್ಭಕ್ಕೆ ಅನುಗುಣವಾಗಿರಬೇಕು.

**ಪರಾಮರ್ಶನ ಗ್ರಂಥಗಳು:**


1. ಅಕ್ಷರ ಕೆ. ವಿ. (1994). ರಂಗ ಪ್ರಪಂಚ. ಅಕ್ಷರ ಪ್ರಕಾಶನ. ಸಾಗರ.
2. ಆದ್ಯ ರಂಗಾಚಾರ್ಯ. (1985). ನಾಟ್ಯಶಾಸ್ತ್ರ. ಅಕ್ಷರ ಪ್ರಕಾಶನ. ಸಾಗರ.
3. ಕೃಷ್ಣಶಾಸ್ತ್ರೀ ಎ. ಆರ್. (1990). ಸಂಸ್ಕೃತ ನಾಟಕ. ಬಿ. ಪಾರ್ಥಸಾರಥಿ. ಬೆಂಗಳೂರು.
4. ರಾಮನಾಥ್ ಎಚ್. ಕೆ. (1990). ಕನ್ನಡ ರಂಗಭೂಮಿಯ ವಿಕಾಸ. ಅಭಿನಯ ಪ್ರಕಾಶನ. ಮೈಸೂರ್.
5. ನಿಂಗು ಸೊಲಗಿ. (2012). ಮಕ್ಕಳ ರಂಗಭೂಮಿ: ಪ್ರದರ್ಶನ-ಪ್ರಕ್ರಿಯೆ. ಚಿಲಿಪಿಲಿ ಪ್ರಕಾಶನ. ಧಾರವಾಡ.
6. ಅಮೃತಾ ಆರ್. ಕಟಕೆ. (2002). ಹೈದರಾಬಾದ್ ಕರ್ನಾಟಕದ ಸಾಹಿತ್ಯ: ಒಂದು ಅಧ್ಯಯನ. ಯಮುನಾ ಪ್ರಕಾಶನ. ಗುಲ್ಬರ್ಗ.
7. ಪ್ರಸನ್ನ. (2007). ನಟನೆಯ ಪಾಠಗಳು. ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು.
8. ಮರುಳಸಿದ್ದಪ್ಪ ಕೆ. (2003). ಒಡನಾಟ. ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.